
### ‘ಶೇಕಿಂಗ್’ ನಗು



‘ಶೇಕಿಂಗ್ (ಶಾಕಿಂಗ್) ಜಮಾನ’ (ಮಾ. 14, ಸುಮಾ ರಮೇಶ್) ‘ಮಂದಹಾಸ’ ಲೇಖನ ಶಾಕಿಂಗ್ ಆಗಿರದೆ ‘ಶೇಕು’ ಬೇಕು ಬೇಕು ಎಂದು ಮನಸ್ಸು ಬಯಸುವಂಥ ಬರಹವಾಗಿತ್ತು. ಓದುತ್ತಾ ಹೋದಂತೆ ಮಂದಹಾಸ ಮೂಡಿ ಕೂತಲ್ಲೇ ಶೇಕಿಂಗ್ ಮಾಡುವಂತಿತ್ತು.

—ಬಿ. ಶೋಭಾ ಅರಸ, ತೆಕ್ಕಟ್ಟೆ

### ಅತ್ಯುತ್ತಮ ನಗೆಬರಹ

ಶೇಕಿಂಗ್ ಕುರಿತ ನಗೆಬರಹ ಅತ್ಯುತ್ತಮವಾಗಿದೆ. ಮೊದಲಿನಿಂದ ಕೊನೆಯವರೆಗೆ ಪ್ರತಿ ಸಾಲೂ ಹೊಟ್ಟೆ ಹುಣ್ಣಾಗುವಂತೆ ನಗಿಸಿತು.

—ರಮೇಶ್ ಎಸ್.

### ಹೃದಯಂಗಮ ಕಥನ

‘ಒಳಗಣ್ಣೋಟದ ಚಿತ್ತಾರ’ (ಮಾ. 07, ಕೆ.ಆರ್. ಉಮಾದೇವಿ ಉರಾಳ) ಅನುಭವ ಕಥನ ಬಹಳ ಇಷ್ಟವಾಯಿತು. ಶಿಕ್ಷಕರ ಮತ್ತು ಮಕ್ಕಳ ಬಾಂಧವ್ಯ, ಶಾಲಾ ಶಿಸ್ತು, ಕರ್ತವ್ಯಪರತೆ, ಹಳ್ಳಿಯ ವಾತಾವರಣ ಮತ್ತು ಗ್ರಾಮಸ್ಥರಲ್ಲಿ ಶಾಲೆಯ ಹಾಗೂ ಅಧ್ಯಾಪಕರ ಮೇಲಿನ ಪ್ರೀತಿ ಎಲ್ಲವೂ ಪುಳಕ ಹುಟ್ಟಿಸಿದವು. ಶಾಲಾ ಶಿಕ್ಷಕಿಯಾಗಿ ತಮ್ಮ ಅನುಭವಗಳನ್ನು ಹೃದಯಂಗಮವಾಗಿ ತೆರೆದಿಟ್ಟಿದ್ದಾರೆ. ನಾನೂ ಆ ಭಾಗದಲ್ಲೇ ಓದಿದ್ದರಿಂದ ಎಲ್ಲ ಸನ್ನಿವೇಶ ಕಣ್ಮುಂದೆ ನಡೆಯುತ್ತಿದೆ ಎಂದೆನಿಸಿತು.

—ಬಾ.ನೀ. ರಾಮಮೂರ್ತಿ, ಮೈಸೂರು

### ನನ್ನ ನೆನಪುಗಳ ಚಿತ್ತಾರ

‘ಒಳಗಣ್ಣೋಟದ ಚಿತ್ತಾರ’ ತುಂಬಾ ಚೆನ್ನಾಗಿದೆ. ಶಾಲಾ ಮುಖೋಪಾಧ್ಯಾಯಿನಿಯಾಗಿ ಲೇಖಕಿಯ ಅನುಭವ ಉತ್ಸಾಹಪೂರಕವಾಗಿತ್ತು. ನನ್ನ ನೆನಪುಗಳನ್ನೂ ಮೆಲುಕು ಹಾಕಿಸಿತು. ನಾನು ಸ್ನಾತಕೋತ್ತರ ಪದವೀಧರೆಯಾಗಿದ್ದೂ ಚಿಕ್ಕಮಗಳೂರು ಜಿಲ್ಲೆಯ ಬಾಲಕರ ಹಿರಿಯ ಪ್ರಾಥಮಿಕ ಶಾಲೆಯ ಪದವೀಧರ ಮುಖ್ಯೋಪಾಧ್ಯಾಯಿನಿಯಾಗಿ (ಸರ್ಕಾರಿ ಶಾಲೆ ಕಡೂರು, 1979ರಿಂದ 1984) ಕಾರ್ಯನಿರ್ವಹಿಸಿದ್ದು ಅಂದಿನ ವಿದ್ಯಾರ್ಥಿಗಳ ಪ್ರೀತಿ, ವಿಶ್ವಾಸ, ಆದರಣೆ, ಭಯ, ಭಕ್ತಿ ಎಲ್ಲವೂ ನೆನಪಿಗೆ ಬಂದು ರೋಮಾಂಚನವಾಯಿತು.

—ಕೆ.ಎಮ್. ಚೌರ್, ವಿಜಯಪುರ



### ಜ್ಯೂಟೌನ್ ಎಂಬ ಸುಂದರ ಲೋಕ

‘ಜ್ಯೂಟೌನ್ ಎಂಬ ಟೈಂ ಕ್ಯಾಪ್ಸೂಲ್’ (ಮಾ. 14, ಆನಂದತೀರ್ಥ ಪ್ಯಾಟಿ) ಪ್ರವಾಸ ಲೇಖನ ಆಸಕ್ತಿದಾಯಕವಾಗಿದೆ. ಕೇರಳದಲ್ಲಿನ ಯಹೂದಿಗಳ ಪುಟ್ಟಲೋಕದ ಪರಿಚಯವಾಯಿತು. ಆ ಬೀದಿಗಳಲ್ಲಿ ಅಲೆದಾಡಿದಂಥ ಭಾವ ನೀಡಿತು. ಜ್ಯೂಟೌನ್‌ನ ಅಪರೂಪದ ಸಂಸ್ಕೃತಿಯ ಪರಿಚಯವಾಯಿತು.

—ನಂದನಾ ಎಸ್., ನೆಲಮಂಗಲ




### ‘ಲವ್ ಇನ್’ ಆಗಲಿ...

‘ಲಿವ್ ಇನ್; ಸಮ್ಮತಿಯ ಸಹಬಾಳ್ವೆಗೆ ದೊರೆಯುತ್ತಿದೆಯೇ ಸ್ವೀಕೃತಿ?’ ಮಾ. 14, ಕೋಡಿಬೆಟ್ಟು ರಾಜಲಕ್ಷ್ಮಿ) ಲೇಖನ ಮೆಚ್ಚುಗೆ ಆಯಿತು. ಸಮಾಜದಲ್ಲಿ ವಿವಾಹ ಮತ್ತು ವೈವಾಹಿಕ ಜೀವನದ ಬಗ್ಗೆ ದೃಷ್ಟಿಕೋನಗಳು ಸಹ ರೂಪಾಂತರ ಹೊಂದುತ್ತಿವೆ. ವಿವಾಹೇತರ ಸಂಬಂಧಗಳು ಹೊಸವೇನಲ್ಲ. ಬಹಳ ಹಿಂದಿನಿಂದಲೂ ಇದ್ದುವು. ಈಗ ‘ಲಿವ್ ಇನ್’ ಎಂದು ಕರೆದು ವಿವಾಹಕ್ಕೆ ಪರ್ಯಾಯ ವ್ಯವಸ್ಥೆ ಎಂದು ಮನ್ನಣೆ ಕೊಡುವ ಕಾಲ ಕೂಡಿ ಬಂದಿದೆ. ‘ಲಿವ್ ಇನ್’ಗಳು ‘ಲವ್ ಇನ್’ಗಳೂ ಆಗಲಿ ಎಂದು ಆಶಿಸೋಣವೇ?

—ಲಕ್ಷ್ಮಣ್ ಗೊರ್ಲಕಟ್ಟೆ, ಮೈಸೂರು

### ಸಂಬಂಧದ ಭಿನ್ನ ಆಯಾಮ

ಹೊಸ ಪೀಳಿಗೆಯ ಆಯ್ಕೆಯಾಗಿರುವ ‘ಸಹಬಾಳ್ವೆ’ ಕುರಿತು ಲೇಖಕಿ ವಿಸ್ತೃತವಾಗಿ ಬರೆದಿದ್ದಾರೆ. ಗಂಡು ಹೆಣ್ಣಿನ ನಂಟಿನ ಹಲವು ಆಯಾಮಗಳು ಕೂಡ ಲೇಖನದಲ್ಲಿವೆ. ‘ಲಿವ್ ಇನ್’ ಸಂಬಂಧದ ಹಿನ್ನೆಲೆ, ಸಾಧ್ಯಾಸಾಧ್ಯತೆಗಳು, ಪರಿಣಾಮ, ಕಾನೂನು ಕಟ್ಟಲೆ... ಜೊತೆಗೆ ಸಾಮಾಜಿಕ ವ್ಯವಸ್ಥೆಯ ಬದಲಾವಣೆ– ಬೆಳವಣಿಗೆಯ ಮೇಲೂ ಇಣುಕು ನೋಟ ಬೀರಿದೆ.

—ಅಶೋಕ್ ಕೆ.ಸಿ., ಬೆಂಗಳೂರು

### ರಸದೌತಣ!

‘ಕಿವೀದು ಬಿದ್ದೋಗಿದೆ’ (ಮಾ. 14, ಉಷಾ ನರಸಿಂಹನ್) ಪ್ರಬಂಧ ಓದಿ ಅಬ್ಬಾ ಶಹಬ್ಬಾಸ್ ಅಂತ ಮನಸಿಗೆ ತಂತಾನೇ ಅನ್ನಿಸಿತು. ಎಷ್ಟು ಸೊಗಸಾದ ಪ್ರಬಂಧ! ಒಂದೊಂದು ಸಂದರ್ಭ ಹೆಣೆದಿರುವುದೂ ತುಂಬಾ ಚೆನ್ನಾಗಿದೆ. ಇಂತಹ ಲೇಖನಗಳ ರಸದೌತಣ ಬಡಿಸಿ ಜೀವನದಲ್ಲಿ ಉತ್ಸಾಹ ತರುವ ‘ಸುಧಾ’ಗೆ ಧನ್ಯವಾದಗಳು.

—ವಿನು ಗಂಗೆ



### ನವಿರು ಹಾಸ್ಯ

ಪ್ರಬಂಧ ಓದಿ ಹೊಟ್ಟೆ ತುಂಬಾ ನಕ್ಕೆ. ‘ಹಾಸ್ಯ’ದ ಹೆಸರಿನಲ್ಲಿ ಬರುವ ಅಪಹಾಸ್ಯಕ್ಕಿಂತ ಇಂತಹ ನವಿರು ಹಾಸ್ಯಗಳು ಸುಂದರವಾಗಿರುತ್ತವೆ. ಸಂತೋಷ ಸಸಿಹಿತ್ಲುರವರ ರೇಖಾಚಿತ್ರವೂ ಬರಹಕ್ಕೆ ಪೂರಕವಾಗಿ ಬಹಳ ಚೆನ್ನಾಗಿದೆ.

—ಶೃಂಗೇರಿ ಲೋಕೇಶ್, ಬೆಂಗಳೂರು

### ನೆನಪುಗಳ ಮೆರವಣಿಗೆ

ಪ್ರಬಂಧ ಓದುತ್ತಿದ್ದಂತೆ ಹಲವು ಸಂಗತಿಗಳು ಮನದ ತೆರೆ ಮೇಲೆ ಮೂಡಿಬಂದವು. ಬೆಂಗಳೂರಿನ ಊರ್ವಶಿ, ಉಮಾ, ಪಲ್ಲವಿ ಥಿಯೇಟರುಗಳಿಗೆ ಓಡುತ್ತಿದ್ದ ನಮ್ಮ ಯೌವನದ ದಿನಗಳು ಥಟ್ಟನೆ ಕಣ್ಮುಂದೆ ಬಂದವು. ಥಿಯೇಟರಿನ ಸಿಡುಕಾಟ, ಜಗಳ ಎಲ್ಲವನ್ನು ಕಣ್ಣಿಗೆ ಕಟ್ಟಿದಂತೆ ವರ್ಣಿಸಿದ್ದಾರೆ.

—ಸಿ.ಆರ್. ಚಂಪಾ, ಬೆಂಗಳೂರು

### ‘ಶ್ರೀ’ಕಾರ

‘ಸ್ತ್ರೀ–ಸಿರಿ ಸಂಭ್ರಮ’ (ಮಾ. 07) ನಡುವೆ ಮತ್ತೊಂದು ಅಕ್ಷರ ಸೇರುವುದು ಸಮುಚಿತವಲ್ಲವೇ? ‘ಸ್ತ್ರೀ–ಶ್ರೀ–ಸಿರಿ’ (‘ಶ್ರೀ’ ಕಾರವಿಲ್ಲದೆ ಎಂಥ ಸಂಭ್ರಮ? ಬರಿಯ ಭ್ರಮ!)

—ಸಿಪಿಕೆ, ಮೈಸೂರು

### ತಿದ್ದುಪಡಿ

ಮಾರ್ಚ್ 21ರ ಸಂಚಿಕೆಯ ‘ಬೆಂಕಿಯಲ್ಲಿ ಅರಳಿದ ಜಾಣ ಸಾಧಕಿಯರು’ (ನೇಮಿಚಂದ್ರ) ಲೇಖನದ ‘ಪಾಠಕ್ಕೆ ಮೊದಲು ಕಡಲೆಕಾಯಿ’ ಶೀರ್ಷಿಕೆಯ ಟಿಪ್ಪಣಿಯಲ್ಲಿ ರಾಜೇಶ್ವರಿ ಅವರ ಬದಲಾಗಿ ಬೇರೊಬ್ಬರ ಫೋಟೊ ಪ್ರಕಟವಾಗಿದೆ. ಪ್ರಮಾದಕ್ಕಾಗಿ ವಿಷಾದಿಸುತ್ತೇವೆ.

—ಸಂ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in